# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1080 |
| 2. | ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| 3. | ಉತ್ತರಿಸುವ ದಿನಾಂಕ | : | 25-07-2024 |
| 4. | ಉತ್ತರಿಸುವವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ವಾರ್ಡ್‌ಗಳ ಸಂಖ್ಯೆಯೆಷ್ಟು; ಇರುವಂತಹ ವಾರ್ಡ್‌ಗಳಲ್ಲಿ ಪಾಲಿಕೆಯ ಸ್ವಂತ ಆಸ್ತಿ ಯಾವ ಪ್ರಮಾಣದಲ್ಲಿದೆ; (ಪೂರ್ಣ ವಿವರ ನೀಡುವುದು) | ಬಿಬಿಎಂಪಿ ಅಧಿನಿಯಮ, 2020ರ ಅನುಸಾರ ಬಿಬಿಎಂಪಿ ವ್ಯಾಪ್ತಿಯಲ್ಲಿ 225 ವಾರ್ಡ್‌ಗಳನ್ನು ಗುರುತಿಸಲಾಗಿತ್ತು. ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ ಸಂಖ್ಯೆ 36) ಅನ್ನು "ದಿನಾಂಕ:15-05-2025" ರಿಂದ ಜಾರಿಗೊಳಿಸಲಾಗಿರುತ್ತದೆ.<br><br>ಈ ಅಧಿನಿಯಮದ ಅವಕಾಶಗಳ ಅನುಸಾರ ನಗರ ಪಾಲಿಕೆಗಳನ್ನು ಸ್ಥಾಪಿಸಿ ವಾರ್ಡ್‌ಗಳನ್ನು ರಚಿಸಲಾಗುತ್ತದೆ.<br><br>ಬಿ.ಬಿ.ಎಂ.ಪಿ.ಯ ಆಸ್ತಿ ಶಾಖೆಯ ಆಸ್ತಿ ವಹಿಯಲ್ಲಿ ನಮೂದಿಸಿರುವಂತೆ, ಪಾಲಿಕೆ ವಶದಲ್ಲಿರುವ ಆಸ್ತಿಗಳ ಮತ್ತು ಕನ್ಸರ್ವೆನ್ಸಿ ಲೈನ್‌ಗಳ ವಿವರ ಈ ಕೆಳಕಂಡಂತಿರುತ್ತವೆ. |
| ಆ | ಪಾಲಿಕೆಯ ಆಸ್ತಿಯಾದ ಕನ್ಸರ್ವೆನ್ಸಿ ಲೈನ್ (ಖಾಲಿ ಜಾಗದ) ಸಂಖ್ಯೆಯೆಷ್ಟು; (ವಿವರಗಳನ್ನು ಒದಗಿಸುವುದು) | |

| ಕ್ರ. ಸಂ. | ವಲಯ ವಾರು | ಪಾಲಿಕೆಯ ಸ್ವಂತ ಆಸ್ತಿಗಳ ಸಂಖ್ಯೆ | ಕನ್ಸರ್ವೆನ್ಸಿ ಲೈನ್‌ಗಳ ಸಂಖ್ಯೆ |
|---|---|---|---|
| 1. | ಪೂರ್ವ | 1205 | 14 |
| 2. | ಪಶ್ಚಿಮ | 636 | 42 |
| 3. | ದಕ್ಷಿಣ | 999 | 125 |
| 4. | ಯಲಹಂಕ | 422 | 0 |
| 5. | ಮಹದೇವಪುರ | 576 | 0 |
| 6. | ಬೊಮ್ಮನಹಳ್ಳಿ | 407 | 0 |
| 7. | ದಾಸರಹಳ್ಳಿ | 212 | 20 |
| 8. | ರಾಜರಾಜೇಶ್ವರಿನಗರ | 447 | 0 |
| | **ಒಟ್ಟು** | **4904** | **201** |

..2...

| | | |
|---|---|---|
| ಇ | ಬಹಳಷ್ಟು ವರ್ಷಗಳಿಂದ ಖಾಲಿ ಇದ್ದ ಪಾಲಿಕೆಯ ಕನ್ಸರ್ವೆನ್ಸಿ ಲೈನ್ ಆಸ್ತಿಯನ್ನು ಈಗಾಗಲೇ ಬಹಳಷ್ಟು ಜನರು ಕಬಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮವೇನೆ; | ಪಾಲಿಕೆಯ ಎಂಟು ವಲಯಗಳ ಪೈಕಿ ಪೂರ್ವ, ದಕ್ಷಿಣ, ಬೊಮ್ಮನಹಳ್ಳಿ, ದಾಸರಹಳ್ಳಿ ಮತ್ತು ಮಹದೇವಪುರ ವಲಯಗಳಲ್ಲಿ ಯಾವುದೇ ದೂರು ಬಂದಿರುವುದು ಕಂಡು ಬಂದಿರುವುದಿಲ್ಲ.<br><br>ರಾಜರಾಜೇಶ್ವರಿನಗರ, ಯಲಹಂಕ ಮತ್ತು ಪಶ್ಚಿಮ ವಲಯ ವ್ಯಾಪ್ತಿಗಳಲ್ಲಿ ತಲಾ ಒಂದೊಂದು ದೂರು ಬಂದಿದ್ದು, ಸದರಿ ದೂರುಗಳ ಬಗ್ಗೆ ಅಗತ್ಯ ಕ್ರಮವಹಿಸಲಾಗಿದೆ. |
| ಈ | ಪಾಲಿಕೆಯ ಆಸ್ತಿಯನ್ನು ಕಬಳಿಸಿರುವ ಬಗ್ಗೆ ಸಾರ್ವಜನಿಕರಿಂದ ಪಾಲಿಕೆಗೆ ಯಾವುದಾದರೂ ದೂರು ಬಂದಿದೆಯೇ; ಬಂದಿದ್ದಲ್ಲಿ, ಅದರ ಪೂರ್ಣ ವಿವರಗಳನ್ನು ಒದಗಿಸುವುದು; ದೂರುಗಳು ಬಂದಿದ್ದರೂ ಸಹ ಇದುವರೆಗೂ ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಉ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರಾರಂಭಗೊಂಡ ಅವಧಿಯಿಂದ ಒಟ್ಟು ಪಾಲಿಕೆಯ ಆಸ್ತಿಯನ್ನು ಎಷ್ಟು ಜನರಿಗೆ ಗುತ್ತಿಗೆ ನೀಡಲಾಗಿದೆ; ಇದರಿಂದ ಎಷ್ಟು ಆದಾಯ ಬರುತ್ತಿದೆ; ಎಷ್ಟು ವರ್ಷಕ್ಕೆ ಜಾಗವನ್ನು ಗುತ್ತಿಗೆಗೆ ನೀಡಲಾಗಿದೆ; ಗುತ್ತಿಗೆ ಅವಧಿ ಮುಗಿದಿದ್ದರೂ ಸಹ ಪಾಲಿಕೆ ಆಸ್ತಿಯನ್ನು ತನ್ನ ವಶಕ್ಕೆ ಪಡೆದುಕೊಳ್ಳದಿರಲು ಕಾರಣವೇನು; ಪಾಲಿಕೆ ಕನ್ಸರ್ವೆನ್ಸಿ ಲೈನ್ ಆಸ್ತಿ ಹಾಗೂ ಇನ್ನಿತರ ಆಸ್ತಿಯ ವಿವರ ಹಾಗೂ ಅಂಕಿ ಅಂಶಗಳ ವಿವರಗಳನ್ನು ಒದಗಿಸುವುದು; | • ಪೂರ್ವ, ಪಶ್ಚಿಮ, ದಕ್ಷಿಣ, ದಾಸರಹಳ್ಳಿ, ಮಹದೇವಪುರ ಮತ್ತು ಯಲಹಂಕ ವಲಯಗಳಲ್ಲಿ 345 ಪಾಲಿಕೆ ವತಿಯಿಂದ ಗುತ್ತಿಗೆಗೆ ನೀಡಲಾಗಿದೆ. ರಾಜರಾಜೇಶ್ವರಿನಗರ ಮತ್ತು ಬೊಮ್ಮನಹಳ್ಳಿ ವಲಯಗಳಲ್ಲಿ ಪಾಲಿಕೆ ವತಿಯಿಂದ ಯಾವುದೇ ಆಸ್ತಿಯನ್ನು ಲೀಸ್‌ಗೆ ನೀಡಿರುವುದಿಲ್ಲ.<br>• ಗುತ್ತಿಗೆ ನೀಡಿರುವ ಆಸ್ತಿಗಳಿಂದ ವರ್ಷಕ್ಕೆ ರೂ.1,50,53,937.19/- ಆದಾಯ ಸಂಗ್ರಹವಾಗಬೇಕಿದೆ.<br>• ಪಾಲಿಕೆಯ ವಿವಿಧ ಆಸ್ತಿಗಳನ್ನು ನಿಯಮಾನುಸಾರ ಪರಿಶೀಲಿಸಿ ವಿಭಿನ್ನ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ. ನ್ಯಾಯಾಲಯ ತಡೆಯಾಜ್ಞೆ / ಆದೇಶ ಇರುವ ಪ್ರಕರಣಗಳಲ್ಲಿ ಮಾತ್ರ ಗುತ್ತಿಗೆ ಅವಧಿ ಮುಗಿದ ಆಸ್ತಿಗಳನ್ನು ಪಾಲಿಕೆಯ ವಶಕ್ಕೆ ಪಡೆಯುವಲ್ಲಿ ವಿಳಂಬವಾಗುತ್ತಿದೆ.<br>• ಪಾಲಿಕೆಯ ಆಸ್ತಿಯಾದ ಕನ್ಸರ್ವೆನ್ಸಿ ಲೈನ್ (ಖಾಲಿ ಜಾಗದ) ಸಂಖ್ಯೆ :201. |
| ಊ | ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಛೇರಿಗಳು ಎಷ್ಟು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಡೆಸುತ್ತಿದೆ; ಇದಕ್ಕೆ ಪಾಲಿಕೆಯಿಂದ ಬಾಡಿಗೆಗಾಗಿ ವೆಚ್ಚವಾಗುತ್ತಿರುವ ಮೊತ್ತ ಎಷ್ಟು? | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಛೇರಿಗಳು ವಲಯವಾರು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಕಛೇರಿಗಳ ಬಾಡಿಗೆಗಾಗಿ ಬಿಬಿಎಂಪಿಯಿಂದ ಮಾಸಿಕ ಒಟ್ಟು ರೂ.4,70,558/-ರೂ ಗಳ ಮೊತ್ತ ವೆಚ್ಚವಾಗುತ್ತಿದೆ. |

**ಸಂಖ್ಯೆ: ನಅಇ 136 ಬಿಬಿಎಸ್ 2024**

**(ಡಿ.ಕೆ.ಶಿವಕುಮಾರ್)**
ಉಪ ಮುಖ್ಯಮಂತ್ರಿ.